ಗ) ಮಾಗಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಸರಿಪಡಿಸುವುದು

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಮೂರು ದಿವಸಗಳಿಂದ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ. ಕುಡಿಯುವ ನೀರಿಗೆ ಮತ್ತು ಓದತಕ್ಕ ಮಕ್ಕಳಿಗೆ ಅನಾನುಕೂಲವಾಗಿದೆ. ದಯಮಾಡಿ ವಿದ್ಯುತ್ ಏಕೆ ಸ್ಥಗಿತಗೊಂಡಿದೆ, ಅದನ್ನು ಯಾವಾಗ ಸರಿಮಾಡುತ್ತೀರಿ ಎಂಬ ಬಗ್ಗೆ ಸರ್ಕಾರದಲ್ಲಿ ಕೇಳಬಯಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾಗಡಿಗೆ ವಿದ್ಯುತ್ ಸರಬರಾಜಾಗದಿರುವ ಬಗ್ಗೆ ತಿಳಿಸಿದ್ದಾರೆ. ಅಲ್ಲಿರುವ ಎ.ಡಬ್ಲ್ಯೂ.ಎ, ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಮುಖ್ಯ ಅಭಿಯಂತರನ್ನು ಈಗಾಗಲೇ ಬರಲು ಹೇಳಿದ್ದೇನೆ. ಒಂದೂವರೆ ಗಂಟೆಗೆ ಮಾನ್ಯ ಸದಸ್ಯರೊಂದಿಗೆ ಅಧಿಕಾರಿಗಳೂ ಸೇರಿದಂತೆ ಚರ್ಚೆ ಮಾಡಿ ಅಲ್ಲಿ ಏನು ತೊಂದರೆಯಾಗಿದೆ ಅದನ್ನು ಸರಿಪಡಿಸಲು ವ್ಯವಸ್ಥೆ ಮಾಡುತ್ತೇನೆ.

ಘ) ಹುಬ್ಬಳ್ಳಿಯಲ್ಲಿ ನೀರಿನ ಸಮಸ್ಯೆ

ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದಲ್ಲಿ ಕೆಲವೊಂದು ವಾರಗಳಿಂದ ನೀರಿನ ಹಾಹಾಕಾರ ಆಗಿದೆ. ಹೋದ ತಿಂಗಳು ಮಂತ್ರಿಗಳಾದ ಮಾನ್ಯ ಬಚ್ಚೇಗೌಡರು ಬಂದಿದ್ದರು. ಆಗ ನಾನು ಮೂರನೇ ಹಂತದ ಯೋಜನೆಯ ಬಗ್ಗೆ ಕೇಳಿದಾಗ ತಕ್ಷಣ ಮಂತ್ರಿಗಳು ಪರಿಶೀಲನೆಯಲ್ಲಿದೆ ಎಂದು ಹೇಳಿದರು. ಆದರೆ ಅದರ ಬಗ್ಗೆ ನಾನು ಪ್ರಶ್ನೆ ಕೇಳಿದಾಗ, ಅದು ಉದ್ಭವಿಸುವುದಿಲ್ಲ, ಯಾವುದೇ ರೀತಿಯ ಯೋಜನೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನನಗೂ ಕೂಡ 120 ಕೋಟಿ ರೂಪಾಯಿಯ ಅಷ್ಟೋಂದು ದೊಡ್ಡ ಮೊತ್ತವನ್ನು ಯೋಜನೆಗೆ ಖರ್ಚು ಮಾಡುವುದು ಸಮಂಜಸವಲ್ಲವೆಂದು ನನಗನ್ನಿಸುತ್ತದೆ. ಅದೇ ರೀತಿ ಮಾನ್ಯ ಬಚ್ಚೇಗೌಡರು ಹೋದಸಲ ಹುಬ್ಬಳ್ಳಿಗೆ ಬಂದಾಗ ತಾತ್ಕಾಲಿಕವಾಗಿ ಜೋಗದಿಂದ ಒಂದು ಡೈರೆಕ್ಟ್ ಲೈನ್ ಮಲಪ್ರಭಾಕ್ಕೆ ತಂದುಕೊಂಡರೆ ಯಾವುದೇ ರೀತಿಯ ಅಡೆತಡೆ ಇಲ್ಲದೆ ವಿದ್ಯುಚ್ಛಕ್ತಿ ಸರಬರಾಜು ಆದರೆ ಹುಬ್ಬಳ್ಳಿ ನಗರಕ್ಕೆ ನೀರಿನ ಅಭಾವ ಆಗುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ವಿದ್ಯುಚ್ಛಕ್ತಿ ಅಭಾವವನ್ನು, ಅಡೆತಡೆಯನ್ನು ನಿಲ್ಲಿಸಲಿಕ್ಕೆ ಯಾವುದಾದರೊಂದು ಸಣ್ಣ ಯೋಜನೆಯನ್ನು ಮಾಡಿ ಆ ಡೈರೆಕ್ಟ್ ಲೈನನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡರು (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಲಪ್ರಭಾ ಮತ್ತು ನೀಲಸಾಗರದಿಂದ ಧಾರವಾಡ, ಹುಬ್ಬಳ್ಳಿ ಈ ಎರಡೂ ಪಟ್ಟಣಗಳಿಗೆ ನೀರನ್ನು ಕೊಡುತ್ತಿದ್ದೇವೆ. ಸುಮಾರು ಹದಿನಾರರಿಂದ ಹದಿನೆಂಟು ಲಕ್ಷ ಮಿಲಿಯನ್ ಗ್ಯಾಲನ್ಸ್ ಪರ್ ಡೇ ನೀರನ್ನು ನಾವು ಕೊಡುತ್ತಿದ್ದೇವೆ. ಆದರೆ ಅಲ್ಲಿ ಬಲ್ಕ್ ಸಪ್ಲೈಯರ್ಸ್, ನಾವು ಹಾಗೂ ಅಲ್ಲಿನ ವಿತರಣಾ ವ್ಯವಸ್ಥೆಯನ್ನು ಅಲ್ಲಿನ ಕಾರ್ಪೊರೇಷನ್ ಮಾಡುವಂಥ ವ್ಯವಸ್ಥೆ ಇದೆ. ಆದರೆ ವಿತರಣಾ ವ್ಯವಸ್ಥೆಯಲ್ಲಿ ಸ್ವಲ್ಪ ಅವ್ಯವಸ್ಥೆಗಳು ಆಗಿವೆ, ಅವರು ಕೆಲವು ಭಾಗಗಳಲ್ಲಿ ನೀರನ್ನು ಸಪ್ಲೈ ಮಾಡುತ್ತಾರೆ, ಕೆಲವು ಭಾಗಗಳಿಗೆ ನೀರನ್ನು ಸಪ್ಲೈ ಮಾಡುವುದಿಲ್ಲ ಎಂಬ ದೂರು ಕೇಳಿಬರುತ್ತಿದೆ. ಅದು ನನಗೆ ಗೊತ್ತಿದೆ. ಆದರೆ ಈಗ ಪವರ್ ಸಪ್ಲೈನಲ್ಲಿ ಏರು ಪೇರು ಆಗಿರುವುದರಿಂದ ಎರಡು ದಿವಸಕ್ಕೊಮ್ಮೆ ನೀರನ್ನು ಕೊಡುತ್ತಿದ್ದಾರೆ ಅದನ್ನು ಸರಿ ಮಾಡಿ ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಮಾನ್ಯ ಎಸ್. ಎಸ್. ಪಾಟೀಲರು ಕೂತು ಅಲ್ಲಿನ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ

ಚೀಫ್ ಇಂಜಿನಿಯರ್‌ರವರನ್ನು ಕರೆಯಿಸಿ ಮಾತನಾಡಿದ್ದೇವೆ. 35 ಲಕ್ಷ ರೂಪಾಯಿ ಹಣ ಕಾರ್ಪೊರೇಷನ್‌ನವರು ತುಂಬುವಂಥದ್ದು ಏನು ಇದೆ ಅದನ್ನು ವರ್ಕ್ಸ್ ಎಕ್ಸಿಕ್ಯೂಟ್ ಮಾಡಿ ಒಂದು ಎಕ್ಸ್‌ಪ್ರೆಸ್ ಫೀಡರ್ ಹಾಕಿ ಕೊಡಬೇಕು ಎಂದು ಹೇಳಿದ್ದೇವೆ. ನಾನು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಆ ಎಕ್ಸ್‌ಪ್ರೆಸ್ ಫೀಡರ್ ವ್ಯವಸ್ಥೆ ಏನಾಗಿದೆ ಎಂದು ತಿಳಿದುಕೊಂಡು ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ವಿತರಣೆ ಮಾಡುವಂತೆ ಕಾರ್ಪೊರೇಷನ್‌ಗೆ ತಿಳಿಸಿ ಆ ವ್ಯವಸ್ಥೆಯನ್ನು ಸರಿ ಮಾಡಿಸಿಕೊಡುತ್ತೇನೆ.

ಚ) ರಾಜ್ಯ ರಸ್ತೆ ಸಾರಿಗೆ ಬಸ್‌ಗಳಲ್ಲಿ ಸ್ವಾತಂತ್ರ್ಯ ಯೋಧರಿಗೆ ಸೌಲಭ್ಯ

ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಕೆ. ಎಸ್. ಆರ್.ಟಿ.ಸಿ. ಬಸ್ಸಿನಲ್ಲಿ ಸ್ವಾತಂತ್ರ್ಯ ಯೋಧರಿಗೆ ಪ್ರಯಾಣ ಮಾಡಲಿಕ್ಕೆ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ನಮ್ಮ ಕಡೆಯವರು ತಿರುಪತಿ, ಶ್ರೀಶೈಲಂ ಹಾಗೂ ಮಂತ್ರಾಲಯಕ್ಕೆ ಹೋಗುತ್ತಿದ್ದಾರೆ. ಆದರೆ ಅವರು ಕರ್ನಾಟಕ ಬಸ್ಸಿನಲ್ಲಿ ಹೋದರೆ ಕರ್ನಾಟಕ ಬಾರ್ಡರ್ ಬಂದ ಕೂಡಲೇ ಅವರನ್ನು ಇಳಿಸುತ್ತಾರೆ. ಅವರು ಕರ್ನಾಟಕದಲ್ಲಿ ಮಾತ್ರ ಪ್ರವಾಸ ಮಾಡಬೇಕು ಎಂದು ಆದೇಶ ಇದೆ. ಆದರೆ ಕರ್ನಾಟಕದವರ ಬಸ್ಸು ತಿರುಪತಿಗೂ, ಮಂತ್ರಾಲಯಕ್ಕೂ ಶ್ರೀಶೈಲಕ್ಕೂ ಹೋಗುತ್ತವೆ. ಅದಕಾರಣ ನಮ್ಮ ಕರ್ನಾಟಕದ ಬಸ್ಸು ಎಲ್ಲಿಯವರೆಗೆ ಹೋಗುತ್ತವೆ, ಅಲ್ಲಿಯವರೆಗೆ ಅವರಿಗೆ ಪ್ರಯಾಣ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಅದರ ಜೊತೆಗೆ ಮಾನ್ಯ ಸಾರಿಗೆ ಸಚಿವರು ನನಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಅದು ಏನೆಂದರೆ ಸ್ವಾತಂತ್ರ್ಯ ಯೋಧರಿಗೆ ಈಗಾಗಲೇ ವಯಸ್ಸಾಗಿದೆ ಆದಕಾರಣ ಅವರಿಗೆ ಒಂದು ಕಂಪ್ಯಾನಿಯನ್‌ನ್ನು ತೆಗೆದುಕೊಂಡು ಹೋಗಲು ಅವಕಾಶ ಮಾಡಿ ಕೊಡುತ್ತೇನೆ ಎಂದು. ಆದರೆ ಅದು ಇದುವರೆಗೆ ಇಂಪ್ಲಿಮೆಂಟ್ ಆಗಿಲ್ಲ. ಆದಕಾರಣ ಇವೆರಡನ್ನು ಮುಂದಿನ ಆಗಸ್ಟ್ ಹದಿನೈದರ ಒಳಗಾಗಿ ಇಂಪ್ಲಿಮೆಂಟ್ ಆದರೆ ಬಹಳ ಸಂತೋಷವಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಸ್ವಾತಂತ್ರ್ಯ ಯೋದರಿಗೆ ಕರ್ನಾಟಕದ ಬಸ್ಸಿನಲ್ಲಿ ಪ್ರಯಾಣ ಮಾಡಲಿಕ್ಕೆ ಅವಕಾಶ ಇದೆ, ಆದರೆ ಅವರನ್ನು ಬಾರ್ಡರ್ ಬಂದ ತಕ್ಷಣ ಇಳಿಸುತ್ತಾರೆ, ಅಲ್ಲಿಂದ ಮುಂದಕ್ಕೆ ಅವರನ್ನು ಪ್ರಯಾಣ ಮಾಡುವ ಅವಕಾಶ ಇಲ್ಲ ಎಂದು ಹೇಳಿದ್ದಾರೆ. ಮುಂಚೆ ನಮ್ಮ ಶಾಸಕರಿಗೂ ಕೂಡ ಇದೇ ರೀತಿ ಇತ್ತು. ಅದನ್ನು ಸ್ವಲ್ಪಮಟ್ಟಿಗೆ ತಿದ್ದುಪಡಿ ಮಾಡಿದ್ದೇವೆ. ಅದರ ಬಗ್ಗೆ ನಾವು ವಿಚಾರ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಅದರಲ್ಲಿ ವಿಚಾರ ಮಾಡುವುದು ಏನು ಇದೆ? ಮಾಡುತ್ತೇವೆ ಎಂದು ಹೇಳಿ.

ಶ್ರೀ ಎಂ.ಸಿ. ನಾಣಯ್ಯ : ಅದರ ಬಗ್ಗೆ ಕೆ. ಎಸ್. ಆರ್. ಟಿ.ಸಿ. ಯವರ ಜೊತೆ ಹಾಗೂ ಮಂತ್ರಿಗಳ ಜೊತೆ ಚರ್ಚೆ ಮಾಡಬೇಕಾಗುತ್ತದೆ. ಮತ್ತು ಅದರಿಂದ ಹಣಕಾಸಿನ ತೊಂದರೆ ಎಷ್ಟಾಗುತ್ತದೆ ಎಂದೂ ಕೂಡ ನೋಡಬೇಕಾಗುತ್ತದೆ. ಅದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಡಿ. ಆರ್. ಪಾಟೀಲ್ : ನಾಳೆ ಸದನಕ್ಕೆ ತಿಳಿಸುತ್ತೇನೆ ಎಂದು ಹೇಳಿ.

ಶ್ರೀ ಎಂ.ಸಿ. ನಾಣಯ್ಯ : ಸ್ವಾತಂತ್ರ್ಯ ಯೋಧರು ಬಹಳ ಕಡಿಮೆ ಇರತಕ್ಕಂಥ ಜನರು ಅವರ ಬಗ್ಗೆ ವಿಚಾರ ಮಾಡೋಣ. ನಾವು ನೀವು ಜೊತೆಯಲ್ಲಿಯೇ ಅದರ ಬಗ್ಗೆ ಚರ್ಚೆ ಮಾಡೋಣ.